# ರೇಡಿಯೋದಿಂದ ಬೆಳ್ಳಿತೆರೆಗೆ

**ಬರೀ ಆರ್‌ಜೆ ರೋಹಿತ್ ಎಂದರೆ ಬಹುತೇಕರಿಗೆ ಗೊತ್ತಾಗಲಿಕ್ಕಿಲ್ಲ; ಅವರು ಆರ್‌ಜೆ ರಾಕ್‌ಸ್ಟಾರ್ ರೋಹಿತ್. 92.7 ಬಿಗ್ ಎಫ್‌ಎಂನಲ್ಲಿ ಸದ್ಯ ರಾತ್ರಿ 8ರಿಂದ 10ರವರೆಗೆ 'ನಾಯಕ' ಕಾರ್ಯಕ್ರಮ ನಡೆಸಿಕೊಡುತ್ತಿರುವ ರೋಹಿತ್ ಶತ ದಿನೋತ್ಸವ ಆಚರಿಸಿದ 'ಕರ್ವ'ದ ಚಲನಚಿತ್ರದ ನಾಯಕ ಕೂಡ. ಅವರು ತಮ್ಮ ಇದುವರೆಗಿನ ಆರ್‌ಜೆ ಪಯಣ, ಸಿನಿಮಾರಂಗದಲ್ಲಿನ ಭವಿಷ್ಯದ ಕುರಿತು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.**

**ಸಂದರ್ಶನ: ಸುಧಾ ಹೆಗಡೆ**



**★ ನಿಮ್ಮ ಇದುವರೆಗಿನ ಎಫ್‌ಎಂ ನಂಟು ಹೇಗಿದೆ?**

ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿ ಲಂಡನ್‌ನಲ್ಲಿ 6 ತಿಂಗಳು ಕೆಲಸ ಮಾಡಿದೆ. ಬೆಂಗಳೂರಲ್ಲೇ ಬದುಕು ಕಂಡುಕೊಳ್ಳಬೇಕು; ಸೃಜನಶೀಲತೆಯಿರುವ ಕ್ಷೇತ್ರ ಆಯ್ದುಕೊಳ್ಳಬೇಕು ಎಂದು ಅಲ್ಲಿಯ ಉದ್ಯೋಗ ಬಿಟ್ಟು ವಾಪಸ್ಸು ಬಂದೆ. 92.7 ಬಿಗ್ ಎಫ್‌ಎಂನಲ್ಲಿ ಕಳೆದ ಎಂಟೂವರೆ ವರ್ಷಗಳಿಂದ ಆರ್‌ಜೆಯಾಗಿ ಕೆಲಸ ಮಾಡುತ್ತಿದ್ದೇನೆ. ಇದು ನನಗೆ ಖುಷಿ ಕೊಟ್ಟ ಕ್ಷೇತ್ರ. ಸಂಜೆ 5ರಿಂದ 8ರವರೆಗೆ ಆರ್‌ಜೆ ರಶ್ಮಿಯವರ ಜೊತೆ ಸೇರಿ 'ಟೇಕ್ ಇಟ್ ಈಸಿ' ಕಾರ್ಯಕ್ರಮ ನಡೆಸಿಕೊಡುತ್ತಿದ್ದೆ. ಈಗ ಸಿನಿಮಾ ರಂಗ ಪ್ರವೇಶಿಸಿದ ನಂತರ ರಾತ್ರಿಯ 'ನಾಯಕ' ಕಾರ್ಯಕ್ರಮ ಮಾತ್ರ ನಡೆಸಿಕೊಡುತ್ತಿದ್ದೇನೆ. 'ನಾಯಕ' ಜೀವನದಲ್ಲಿ ಕಷ್ಟಪಟ್ಟು ಮುಂದೆ ಬಂದವರ ಬದುಕಿನ ಕುರಿತು ನಡೆಸಿಕೊಡುವ ಕಾರ್ಯಕ್ರಮ. ಅವರ ಬದುಕಿಗೆ ತಿರುವು ಕೊಟ್ಟ ಘಟನೆಗಳು, ಆಸಕ್ತಿ ಹುಟ್ಟಿಸುವ ಸನ್ನಿವೇಶಗಳು ಮೊದಲಾದವುಗಳನ್ನು ಹೆಣೆಯಲಾಗಿದೆ. ಕ್ರಿಕೆಟ್ ಆಟಗಾರ ಮಹೇಂದ್ರ ಸಿಂಗ್ ಧೋನಿ, ಕಾದಂಬರಿಕಾರ ಎಸ್.ಎಲ್.ಭೈರಪ್ಪ ಮೊದಲಾದವರ ಕುರಿತು ಕಾರ್ಯಕ್ರಮ ಪ್ರಸಾರವಾಗಿದೆ.

ಇಂಥವರ ಬದುಕು ಉಳಿದವರಿಗೆ ಸ್ಫೂರ್ತಿ ಕೊಡುವಂತಾಲಿ ಎಂಬುದು ಇದರ ಉದ್ದೇಶ.

**★ ಎಫ್‌ಎಂನಿಂದ ಸಿನಿಮಾ ರಂಗಕ್ಕೆ ಹೊರಳಿದ್ದು ಹೇಗೆ?**

ಹೆಸರು ಮಾಡಬೇಕೆಂಬ ತುಡಿತ ಬಹುತೇಕರಲ್ಲಿದ್ದೇ ಇರುತ್ತದೆ. ನಾನು ಕೂಡಾ ಇದಕ್ಕೆ ಹೊರತಾಗಿಲ್ಲ. ನಾವು 6–7 ಜನ ಸ್ನೇಹಿತರು ಸೇರಿ ಕಥೆ– ಚಿತ್ರಕಥೆ ಎಂದೆಲ್ಲ ಸಿದ್ಧ ಮಾಡಿಕೊಂಡೆವು. ಹಿರಿಯ ನಟ ರವಿಚಂದ್ರನ್ ಸರ್ ಕೂಡಾ ಬೆಂಬಲಿಸಿದರು. ಆಗ ಹೊರಹೊಮ್ಮಿದ್ದೇ 'ಕರ್ವ'. ಸಿನಿಮಾ ಕಥೆಯಲ್ಲಿ ಗಮನ ಸೆಳೆಯುವಂತಹ ಹೂರಣ ಇರಬೇಕು ಎಂಬುದು ನಮ್ಮ ಆಸೆಯಾಗಿತ್ತು. ಕರ್ವದಲ್ಲಿ ಈ 'ಕಂಟೆಂಟ್' ಇತ್ತು. ಆರಂಭದಲ್ಲಿ ಅದು ಇಷ್ಟೊಂದು ಹೆಸರು ಮಾಡುತ್ತದೆ ಎಂಬ ಅನಿಸಿಕೆ ಇರಲಿಲ್ಲ. ಇದು ಶತದಿನೋತ್ಸವ ಪೂರೈಸಿದೆ. ಈ ಚಿತ್ರದ ನಟನೆಗಾಗಿ ಐಫಾ ಪ್ರಶಸ್ತಿಗೆ ನಾಮಕರಣಗೊಂಡಿದ್ದೆ.

**★ ಹೊಸ ಪ್ರಾಜೆಕ್ಟ್ ಬಗ್ಗೆ ಹೇಳಿ**

ಸದ್ಯ 'ಬಕಾಸುರ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಶೇ. 10ರಷ್ಟು ಚಿತ್ರೀಕರಣ ಮುಗಿದಿದೆ. 'ಕರ್ವ' ತಂಡವೇ ಇಲ್ಲಿಯೂ ಕೆಲಸ ಮಾಡುತ್ತಿದೆ. ರವಿಚಂದ್ರನ್ ಸರ್ ಕೂಡಾ ಇದ್ದಾರೆ. ನಾಯಕಿಯ ಆಯ್ಕೆ ಇನ್ನೂ ಆಗಿಲ್ಲ. ಒಬ್ಬ ಒಳ್ಳೆಯ ವ್ಯಕ್ತಿ ಹಣದ ಹಿಂದೆ ಹೋಗಿ ಹೇಗೆ ಕೆಟ್ಟವನಾಗುತ್ತಾನೆ ಎಂಬುದು ಕಥೆಯ ಸಾರಾಂಶ. ಇದರ ಹೆಸರು ಬಕಾಸುರ ಎಂದಿದ್ದರೂ ಇಂಗ್ಲಿಷ್‌ನಲ್ಲಿ 'ಬಕ್'ಸುರ ಎಂದು ಉಚ್ಚಾರಣೆ ಮಾಡಬಹುದು.

ಇನ್ನು 'ಕರ್ವ'ದ ಎರಡನೇ ಭಾಗದ ಚಿತ್ರೀಕರಣ ಡಿಸೆಂಬರ್‌ನಲ್ಲಿ ಶುರುವಾಗಲಿದೆ. ಮೊದಲ ಭಾಗದಲ್ಲಿರುವ ತಿರುವು ಇದರಲ್ಲಿಯೂ ಇರುತ್ತದೆ. ಪ್ರೇಕ್ಷಕರ ನಿರೀಕ್ಷೆಗೆ ಅನುಗುಣವಾಗಿ ಸಿನಿಮಾ ತೆಗೆಯುವ ವಿಶ್ವಾಸವಿದೆ. ರವಿಚಂದ್ರನ್, ಸುಹಾಸಿನಿ ಮಣಿರತ್ನಂ ಮೊದಲಾದವರು ಅಭಿನಯಿಸಲು ಒಪ್ಪಿಕೊಂಡಿದ್ದಾರೆ.

**★ ನೀವು ರಾಜಕೀಯದಲ್ಲೂ ಆಸಕ್ತಿ ತೋರಿಸುತ್ತಿದ್ದೀರಲ್ಲ...**

ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತಿ ಇತ್ತು. ಆದರೆ ರಾಜಕೀಯ ಹಿನ್ನೆಲೆ ಏನೂ ಇರಲಿಲ್ಲ. ನಮ್ಮ ತಂದೆ ಬ್ಯಾಂಕ್ ಮ್ಯಾನೇಜರ್. 2013ರ ವಿಧಾನಸಭೆ ಚುನಾವಣೆಯಲ್ಲಿ ಜಯನಗರ ಕ್ಷೇತ್ರದಿಂದ ಲೋಕಸತ್ತಾ ಪಕ್ಷದಿಂದ ಸ್ಪರ್ಧಿಸಿದ್ದೆ. ನನಗೆ ಹೆಸರು ಬೇಕಿತ್ತು. ಸೋಲು– ಗೆಲುವು ಮುಖ್ಯವಲ್ಲ. ಪಾಲಿಟಿಕಲ್ ಸೈನ್ಸ್‌ನಲ್ಲಿ ದೂರ ಶಿಕ್ಷಣದಲ್ಲಿ ಪದವಿಯನ್ನೂ ಪಡೆದಿದ್ದೇನೆ.

**★ ಕಿರುತೆರೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತಿ ಇಲ್ಲವೇ?**

ಬಿಗ್‌ಬಾಸ್ ಸೀಸನ್ 2ರಲ್ಲಿ ಭಾಗವಹಿಸಿದ್ದೆ. 11 ವಾರಗಳ ಕಾಲ ಬಿಗ್‌ಬಾಸ್ ಮನೆಯಲ್ಲಿದ್ದೆ. ಝೀ ಟಿವಿಯಲ್ಲಿ 'ಡಿವೈಡೆಡ್' ಎಂಬ ಷೋ ನಡೆಸಿಕೊಟ್ಟೆ. ಆದರೆ ಆದ್ಯತೆ ಏನಿದ್ದರೂ ರೇಡಿಯೋ ಹಾಗೂ ಸಿನಿಮಾ ಅಷ್ಟೆ. ಇದರಲ್ಲೇ ಮುಂದುವರಿಯುವೆ. ಆರ್‌ಜೆ ಗಾಗಿ ಐಆರ್‌ಎಫ್ ಪ್ರಶಸ್ತಿ ಕೂಡ ಬಂತು.